ದಿನಾಂಕಃ 31-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಕೆ ಎಂ ವಕೀಲರಿಂದ

ನಿಮಗೆ ಎಷ್ಟು ಮನೆ ಇದೆ ಎಂದರೆ 5 ಮನೆ ಇದೆ. ಚನ್ನಪ್ಪನಮಗನಾರಾಯಣಪ್ಪನಿಗೆ ಒಂದು ಮನೆ, ಚನ್ನಪ್ಪನ ಮಗ ಮುನಿಶಾಮಿಗೆ ಒಂದು ಮನೆ, ಮುನಿಯಪ್ಪನ ಮಗ ಮುನಿಶಾಮಿಗೆ ಅಂದರೆ ನಿಮಗೆ ಒಂದು ಮನೆ, ವೆಂಕಟರಾಯಪ್ಪನ ಮಗ ಮುನಿರಾಜುಗೆ ಒಂದು ಮನೆ, ಮುನಿಯಪ್ಪನ ಮಗ ಮುನಿನಾರಾಯಣಪ್ಪನಿಗೆ ಒಂದು ಮನೆ. ಈ 5 ಮನೆಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ 5 ಮನೆಗಳನ್ನು ಸೇರಿಸಿರುತ್ತೇನೆ. ಆ 5 ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಮನೆಗಳದ್ದು ಯಾವುದೇ ಸಮಸ್ಯೆ ಇರುವುದಿಲ್ಲ. ಅದರಲ್ಲಿ ಯಾವುದೇ ಭಾಗ ಬೇಕಾಗಿರುವುದಿಲ್ಲ ಅದರಲ್ಲಿ ಅವರವರ ಮನೆಯನ್ನು ಅವರೇ ಕಟ್ಟಿಕೊಂಡಿರುತ್ತಾರೆ. ಸರ್ಕಾರದಿಂದ ಹಣ ಪಡೆದುಕೊಂಡು ಅವರವರೇ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಅವೆಲ್ಲ ಒಟ್ಟು ಕುಟುಂಬದಆಸ್ತಿಯೋ ಅಥವಾ ಅಲ್ಲವಾ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿಯುತ್ತಾರೆ. ಆ ಎಲ್ಲಾ ಮನೆಗಳು ಇರುವುದು ದೊಡ್ಡಕಟಕಮಾಕಲಹಳ್ಳಿಯಲ್ಲಿ ಎಂದರೆ ಸರಿ.

ದಾವಾ ಐಟಂ ನಂ.3 ಸರ್ವೆ ನಂ. 27/5 ರಲ್ಲಿ 18 ಗುಂಟೆಯ ಪೈಕಿ 12 ಗುಂಟೆಗೆ ಚೆಕ್ಕುಬಂದಿ ಪೂರ್ವಕ್ಕೆ ಬಂಡೆ, ಪಶ್ಚಿಮಕ್ಕೆ ಯಾಮನಾರಾಯಣಪ್ಪ, ಉತ್ತರಕ್ಕೆ ಬುಡ್ಡಪ್ಪ, ದಕ್ಷಿಣಕ್ಕೆ ವೆಂಕಟರಾಯಪ್ಪ. ಆ ರೀತಿಯ ಆಸ್ತಿ ಯಾವುದೂ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದ ಚೆಕ್ಕುಬಂದಿಯಲ್ಲಿ ಆಸ್ತಿ ಇದೆಯಾ ಎಂದರೆ ಅದೇ ಚೆಕ್ಕುಬಂದಿಯಲ್ಲಿ ಇದೆ ಎಂದು ನುಡಿಯುತ್ತಾರೆ. ಪೂರ್ವಕ್ಕೆ ಯಾವುದೇ ಬಂಡೆ ಇರುವುದಿಲ್ಲ ಮನೆಗಳು ಇರುತ್ತದೆ ಎಂದರೆ ಸಾಕ್ಷಿಯು ಮನೆಗಳು ಇರುವುದಿಲ್ಲ ಬಂಡೆಗಳು ಇರುತ್ತದೆ ಎಂದು ನುಡಿಯುತ್ತಾರೆ. ಅಲ್ಲಿ ಮನೆಗಳು ಇಲ್ಲ ಬಂಡೆ ಇದೆ ಅಂತ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿ ಐಟಂ ನಂ.1, ಸರ್ವೆ ನಂ.22/1 ರಲ್ಲಿ 4 ಎಕರೆ 35 ಗುಂಟೆ ಜಮೀನು ಚನ್ನಪ್ಪನು ಕೊಂಡುಕೊಂಡಿರುತ್ತಾರೆ ಎಂದರೆ ಎಲ್ಲಾರು ಒಟ್ಟಾಗಿ ಇದ್ದಾಗ ಕೊಂಡು ಕೊಂಡಂತ ಆಸ್ತಿ ಎಂದು ನುಡಿಯುತ್ತಾರೆ. ಚೆನ್ನಪ್ಪ ಬದುಕಿದ್ದಾಗ ದುಡಿದು ಖರೀದಿ ಮಾಡಿದ ಆಸ್ತಿಯಾಗಿದ್ದು ಅದು ಆತನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಅದು ಚನ್ನಪ್ಪನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ ಪಿತ್ರಾರ್ಜಿತ ಆಸ್ತಿಯನ್ನು ಮಾರಿ ಅ ಜಮೀನನ್ನು ಖರೀದಿ ಮಾಡಿರುತ್ತೇವೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಸರ್ವೆ ನಂ.27/5, 27/1 ರಲ್ಲೂ ಮಾರಾಟ ಮಾಡಿ ಆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ನಾರಾಯಣಪ್ಪ ಮತ್ತು ಕದಿರಪ್ಪನಿಗೆ ಮಾರಾಟ ಮಾಡಿರುತ್ತಾರೆ. ಅಲ್ಲಿ ಅವರು ಮನೆಗಳು ಕಟ್ಟಿರುತ್ತಾರೆ. ಸರ್ವೆ ನಂ.27/1 ರಲ್ಲಿ ಮನೆ ಕಟ್ಟಿರುತ್ತಾರೆ. ಎಷ್ಟು ಮನೆಗಳನ್ನು ಕಟ್ಟಿರುತ್ತಾರೆ ಎಂದರೆ 12 ಮನೆಗಳನ್ನು ಕಟ್ಟಿರುತ್ತಾರೆ. ವೇಮನಾರಾಯಣಪ್ಪ ಮತ್ತು ಕದಿರಪ್ಪನ ಅಣ್ಣತಮ್ಮಂದಿರು ಭಾಗ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅದನ್ನು ನಿಮ್ಮ ದಾವಾ ಪತ್ರದದಿಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಅದನ್ನು ಮಾರಿರುವುದರಿಂದ ಹೇಳಿರುವುದಿಲ್ಲ. ಸರ್ವೆ ನಂ.25/1 ರಲ್ಲಿ ಮಾರಾಟ ಮಾಡಿರುವ ಬಗ್ಗೆ ನಿಮ್ಮ ದಾವಾ ದಲ್ಲಿ ಹೆಳಿರುತ್ತೀರಾ ಎಂದರೆ ಗೊತ್ತಿಲ್ಲ. ಸರ್ವೆ ನಂ.30/7 ರಲ್ಲಿ ಚನ್ನರಾಯಪ್ಪ ಉಳುಮೆ ಮಾಡುತ್ತಿದ್ದು, ಅಲ್ಲೆ ಇರುತ್ತಾರೆ. ಚನ್ನರಾಯಪ್ಪ ಮರಣ ಹೊಂದಿರುತ್ತಾರೆ. ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಚನ್ನರಾಯಪ್ಪನಿಗೆ ಒಬ್ಬ ಗಂಡು ಮಗ, ಎರಡು ಹೆಣ್ಣು ಮಕ್ಕಳು. ಈ ದಾವೆಯಲ್ಲಿ ಅವರನ್ನು ಸೇರಿಸಿರುವುದಿಲ್ಲ ಎಂದರೆ ಚೆನ್ನಮ್ಮ ಎನ್ನುವವರನ್ನು ಸೇರಿಸಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.30/2 ಮುನಿಶಾಮಿ ಹೆಸರಿನಲ್ಲಿ ಇದೆ. ಮುನಿಶಾಮಿಗೆ ಒಂದು ಗಂಡು ಮಗು, ಮೂರು ಜನ ಹೆಣ್ಣು ಮಕ್ಕಳು. ಅವರನ್ನು ದಾವೆಯಲ್ಲಿ ಸೇರಿಸಿರುತ್ತೀರಾ ಎಂದರೆ ಸೇರಿಸಿರುತ್ತೇನೆ.

ದಾವೆ ಹಾಕುವಾಗ ಸರ್ವೆ ನಂಬರ್, ಚೆಕ್ಕುಬಂದಿ, ಸರಿಯಾಗಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ 4 ಎಕರೆ 35 ಗುಂಟೆ ಜಮೀನಿನ ಮೇಲೆ ನಿಮಗೆ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಮತ್ತು ವಿಭಾಗ ಮಾಡುವಂತಹ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಮುನಿಶಾಮಿ ಮತ್ತು ಅವರ ಮಕ್ಕಳಿಗೆ

ಮಾತ್ರ ಸಂಬಂಧಿಸಿದ ಆಸ್ತಿ ಎಂದರೆ ಸರಿಯಲ್ಲ ನಿವೇಲ್ಲರೂ ಪ್ರತ್ಯೇಕವಾಗಿ ವಾಸ ಇದ್ದೀರಾ ಎಂದರೆ ಸರಿ. ಚನ್ನಪ್ಪ ಸತ್ತ ನಂತರ ಅವರ ಹೆಂಡತಿ ಮತ್ತು ಮಕ್ಕಳು ಪ್ರತ್ಯೇಕವಾಗಿ ಸ್ವಾಧೀನ ಅನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನಾವು ಸಾವದಿಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ನಿಮಗೆ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಬೇರೆಯವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕಟ್ಟಿರುವ ಮನೆಗಳು ಎಷ್ಟು ಬೆಲೆ ಬಾಳುತ್ತವೆ ಎಂದರೆ ಸಾಕ್ಷಿಯು ಸರ್ಕಾರದಿಂದ ನಮಗೆ ಮನೆ ಇಲ್ಲ ಅಂತ ಹೇಳಿ ಕಟ್ಟಿಕೊಳ್ಳಲು ಕೊಟ್ಟಿರುತ್ತಾರೆ. ಎಲ್ಲಾ ಮನೆಗಳು ಐದು ಐದು ಲಕ್ಷ ಆಗುತ್ತದೆ ಎಂದರೆಆಗುವುದಿಲ್ಲ. ಈ ದಾವೆ ಹಾಕುವ ಪೂರ್ವದ 6 ವರ್ಷದ ಹಿಂದೆ ಪಂಚಾಯ್ತಿ ಮಾಡಿರುತ್ತೇವೆ. ಆ ರೀತಿಯ ಪಂಚಾಯ್ತಿ ಯಾವುದೇ ಆಗಿರುವುದಿಲ್ಲ ಪ್ರತಿವಾದಿಯ ಆಸ್ತಿ ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನೀವು ಮತ್ತು ನಿಮ್ಮ ತಂದೆ ಸೇರಿ ನಿಮ್ಮ ಹೆಂಡತಿ ಹೆಸರಿಗೆ ದಾನ ಪತ್ರ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೂ ಮತ್ತು ದಾವಾ ಆಸ್ತಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

ಪಾಟೀಸವಾಲುಃ ಪ್ರತಿವಾದಿ 5 ರಿಂದ 8 ರವರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

PW1 present, defendant counsel fully cross examination.

For further plaintiff evidence.

Call on 14-08-2023.

**Prl. C. J. & JMFC,.**
**Chintamani**.